**2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು**

**S.C. No**. 268/2021

**ಸಾಕ್ಷಿಯನ್ನು ದಿನಾಂಕ** 20.11.2025 **ರಂದು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಡಾಃ ಚಂದ್ರಶೇಖರ | ಪಿ.ಡಬ್ಲ್ಯೂ-11 |
| ತಂದೆಯ/ಗಂಡನ ಹೆಸರು | : | ಕಂಬೇಗೌಡ | ಸಿ.ಡಬ್ಲ್ಯೂ-20 |
| ವಯಸ್ಸು | : | 49 | |
| ಉದ್ಯೋಗ | : | ಡೆಪ್ಯೂಟಿ ಡೈರೆಕ್ಟರ್ ಆರ್.ಎಫ್.ಎಸ್.ಎಲ್ | |
| ವಾಸ ಸ್ಥಳ | : | ಮೈಸೂರು | |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದಃ**

ನಾನು ಸೆಪ್ಟೆಂಬರ್ 2016 ರಿಂದ ಜನವರಿ 2022 ರವರೆಗೆ ಸಹಾಯಕ ನಿರ್ದೇಶಕನಾಗಿ ಆರ್.ಎಫ್.ಎಸ್.ಎಲ್, ಮೈಸೂರು ಇಲ್ಲಿ ಕಾರ್ಯ ನಿರ್ವಹಿಸಿದ್ದೆನು. ದಿನಾಂಕ 7.9.2021 ರಂದು ನಂಜನಗೂಡಿನ ಪೋಲಿಸ್ ಉಪ ಅಧೀಕ್ಷಕರು ಟಿ.ನರಸೀಪುರ ಪೊಲೀಸ್ ಠಾಣಯ ಕ್ರೈಂ ನಂ.290/2021 ಪ್ರಕರಣದ 13 ಮೊಹರಾದ ವಸ್ತುಗಳನ್ನು ಪೇದೆಯಾದ 610 ಆನಂದ್ ಇವರ ಮೂಲಕ ನಮ್ಮ ಕಛೇರಿಗೆ ತಪಾಸಣೆಗೆ ಕಳುಹಿಸಿದ್ದರು. ಆ ವಸ್ತುಗಳನ್ನು ಸ್ವಾಗತ ವಿಭಾಗದವರು ಸ್ವೀಕರಿಸಿ ಆರ್.ಎಫ್.ಎಸ್.ಎಲ್ ಬಿ.ಎಸ್ 772/2021 ರಂತೆ ಸಂಖ್ಯೆ ನೀಡಿ ಜೀವಶಾಸ್ತ್ರ

ವಿಭಾಗಕ್ಕೆ ಕಳುಹಿಸಿರುತ್ತಾರೆ. ಆ ಕಾಲಕ್ಕೆ ನಾನು ಉಪ ನಿರ್ದೇಶಕನಾಗಿ ಕೆಲಸ ಮಾಡುತ್ತಿದ್ದೆ. ನಾನು ಆ ವಸ್ತುಗಳನ್ನು ವಪರಿಶೀಲಿಸಿದಾಗ ಅವುಗಳ ಮೇಲಿದ್ದ ಸೀಲುಗಳು ಸುಸ್ಥಿತಿಯಲ್ಲಿದ್ದವು ಮತ್ತು ತನಿಖಾಧಿಕಾರಿ ಕಳುಹಿಸಿದ ಮಾದರಿ ಸೀಲಿನೊಂದಿಗೆ ಹೋಲಿಕೆಯಾಗುತ್ತಿದ್ದವು. ಆ ವಸ್ತುಗಳನ್ನು ತೆಗೆದು ನೋಡಿದಾಗ ಕ್ರಮಸಂಖ್ಯೆ1 ರಲ್ಲಿ ರಕ್ತಮಿಶ್ರಿತ ಎಲೆ ಮತ್ತು ಕಡ್ಡಿ, ಕ್ರಮಸಂಖ್ಯೆ 2ರಲ್ಲಿ ಬಳೆ ಚೂರುಗಳು, ಕ್ರಮಸಂಖ್ಯೆ 3 ಮತ್ತು 4 ರಲ್ಲಿ ಒಂದೊಂದು ಚಪ್ಪಲಿ,ಕ್ರಮಸಂಖ್ಯೆ 5 ರಲ್ಲಿ ಒಂದು ಛತ್ರಿ, ಕ್ರಮಸಂಖ್ಯೆ 6 ರಲ್ಲಿ ಮಣ್ಣು, ಕ್ರಮಸಂಖ್ಯೆ 7 ರಲ್ಲಿ ಮಾದರಿಯ ಮಣ್ಣು, ಕ್ರಮಸಂಖ್ಯೆ 8 ರಲ್ಲಿ ಒಂದು ಚೀಲ, ಕ್ರಮಸಂಖ್ಯೆ 9 ರಲ್ಲಿ ವಜೆನಿಲ ಸ್ವಾಬ್, ಕ್ರಮಸಂಖ್ಯೆ 10 ರಲ್ಲಿ ಒಂದು ನೈಟಿ, ಕ್ರಮಸಂಖ್ಯೆ 11 ರಲ್ಲಿ ಒಂದು ಗುದ್ದಲಿ, ಕ್ರಮಸಂಖ್ಯೆ 12 ರಲ್ಲಿ ಒಂದು ಟೀಶರ್ಟ, ಕ್ರಮಸಂಖ್ಯೆ 13 ರಲ್ಲಿ ಒಂದು ನಿಕ್ಕರ್ ಇತ್ತು. ಆ ವಸ್ತುಗಳನ್ನು ರಸಾಯನಿಕ ಪರೀಕ್ಷೆಗೆ ಒಳಪಡಿಸಿದಾಗ ಕ್ರಮಸಂಖ್ಯೆ 1, 3, 4, 6 ರಿಂದ 8, 10 ಮತ್ತು 13 ರ ವಸ್ತುಗಳ ಮೇಲೆ ರಕ್ತದ ಕಲೆ ಕಂಡು ಬಂದಿತ್ತು. ಕ್ರಮಸಂಖ್ಯೆ 2, 5, 11 ಮತ್ತು 12 ರ ಮೇಲೆ ರಕ್ತದ ಕಲೆ ಕಂಡು ಬಂದಿರುವುದಿಲ್ಲ. ಕ್ರಮಸಂಖ್ಯೆ 1, 3, 4, 6, 8, 10 ಮತ್ತು 13 ರ ವಸ್ತುಗಳ ರಕ್ತದ ಕಲೆಗಳನ್ನು ಸಿರಾಲಜಿ ಪರೀಕ್ಷೆಗೆ ಒಳಪಡಿಸಿದಾಗ ಅವುಗಳು ಮಾನವನ ಬಿ ಗುಂಪಿನ ರಕ್ತದ ಕಲೆ ಎಂದು ಕಂಡು ಬಂದಿರುತ್ತದೆ. ವಸ್ತು ಸಂಖ್ಯೆ 7 ರಲ್ಲಿನ ರಕ್ತದ ಕಲೆಗಳು ಹಾಳಾಗಿದ್ದರಿಂದ ಆ ರಕ್ತ ಯಾವ ಗುಂಪಿನದ್ದು ಎಂದು ಕಂಡು ಹಿಡಿಯಲಾಗಿರಲಿಲ್ಲ. ವಸ್ತು ಸಂಖ್ಯೆ 9, 10, 12 ಮತ್ತು 13 ರಲ್ಲಿ ವಿರ್ಯಾಣುವಿನ ಕಲೆ ಕಂಡು ಬಂದಿರುವುದಿಲ್ಲ. ವಸ್ತು ಸಂಖ್ಯೆ 1 ರಲ್ಲಿ ಕೂದಲು ಕಂಡು ಬಂದಿರುವುದಿಲ್ಲ. ನಾನು ಈ ಬಗ್ಗೆ ವರದಿ ನೀಡಿರುತ್ತೇನೆ. ಈಗ ನಾನು ನೋಡುತ್ತಿರುವ ವರದಿ ಅದೇ ಇದ್ದು ಅದನ್ನು ನಿಪಿ56 ಮತ್ತು ಸಹಿಯನ್ನು ನಿಪಿ56 ಎ ಎಂದು ಗುರುತಿಸಿದೆ. ಪರೀಕ್ಷೆ ಬಳಿಕ ಎಲ್ಲ ವಸ್ತುಗಳನ್ನು ಪುನಃ ಪ್ಯಾಕ್ ಮಾಡಿ ಸೀಲ್ ಮಾಡಿ ವರದಿಯೊಂದಿಗೆ ತನಿಖಾಧಿಕಾರಿಗೆ ಕಳುಹಿಸಿರುತ್ತೇನೆ. ಈಗ ನಾನು

ನೋಡುತ್ತಿರುವ 2 ಸ್ಟ್ಯಾಂಪಲ್ ಸೀಲುಗಳು ನಾನು ಆ ವಸ್ತುಗಳ ಜೊತೆ ಕಳುಹಿಸಿದ ಸೀಲುಗಳಿವೆ. ಸದರಿ ಸೀಲುಗಳನ್ನು ನಿಪಿ56 ಬಿ ಮತ್ತು ನಿಪಿ56 ಸಿ ಎಂದು ಗುರುತಿಸಿದೆ. ಈಗ ನಾನು ನೋಡುತ್ತಿರುವ ಎಂಓ 1 ರಿಂದ ಎಂಓ 11 ಎಂದು ಗುರುತಿಸಿರುವ ವಸ್ತುಗಳು ನಾನು ತಪಾಸಣೆ ಮಾಡಿದ ಕ್ರಮಸಂಖ್ಯೆ 1 ರಿಂದ 8, 10 ರಿಂದ 13 ರ ವಸ್ತುಗಳಿವೆ. ಈಗ ನಾನು ನೋಡುತ್ತಿರುವ ಇನ್ನೊಂದು ವಸ್ತು ನಾನು ತಪಾಸಣೆ ಮಾಡಿದ ಕ್ರಮಸಂಖ್ಯೆ 9 ರ ವಜೆನಿಯ ಸ್ವಾಬ್ ಇರುತ್ತದೆ. ಸದರಿ ವಸ್ತುವನ್ನು ಎಂಓ 12 ಎಂದು ಗುರುತಿಸಿದೆ.

**<u>ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಆರ್.ಎ ವಕೀಲರಿಂದಃ</u>**

ಆ ವಸ್ತುಗಳನ್ನು ಸೀಲ್ ಮಾಡಿ ಅವುಗಳೊಂದಿಗೆ ಡಿ.ಎಸ್.ಪಿ ರವರ ಪತ್ರ ನೀಡಿದ್ದರು. ಘಟನೆ ನಡೆದು ಬಹಳ ದಿನಗಳ ನಂತರ ಕ್ರಮಸಂಖ್ಯೆ 6 ಮತ್ತು 7 ರಂತಹ ವಸ್ತುಗಳನ್ನು ತಪಾಸಣೆ ಮಾಡಿದರೆ ಸರಿಯಾದ ಫಲಿತಾಂಶ ಬರುವುದಿಲ್ಲ ಎಂದರೆ ಸರಿಯಲ್ಲ. ಪೋಲಿಸರಿಗೆ ಸಹಾಯ ಮಾಡುವ ಸಲುವಾಗಿ ನಿಪಿ56 ರಂತೆ ವರದಿ ತಯಾರಿಸಿ ನೀಡಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ.,

2 ನೇ ಅಪರ ಜಿಲ್ಲಾ ಮತ್ತು ಸತ್ತ ನ್ಯಾಯಾಧೀಶರು

ಮೈಸೂರು